
# ಕುತೂಹಲಕಾರಿ ಕಳವಂತಿ ಶಿಖರ





ಕಳವಂತಿ ದುರ್ಗ ಎಂದು ಕರೆಯುವ ಈ ರೋಮಾಂಚಕಾರಿ ಶಿಖರವು ಮುಂಬೈ ಪುಣೆ ಹೆದ್ದಾರಿಯ ಎಡಬದಿಯಲ್ಲಿ ಕಾಣಸಿಗುತ್ತದೆ. ಇದನ್ನು ಮರಾಠಿಯಲ್ಲಿ 'ಕಲಾವಂತಿನಿಚಾ ಸುಲ್ಕಾ' ಎಂದು ಕರೆಯಲಾಗುತ್ತದೆ. ಹೆಸರಲ್ಲಿ ಕೋಟೆಯಿದ್ದರೂ ಇದು ಕೋಟೆಯಲ್ಲ, ಮಹಾರಾಷ್ಟ್ರದ ರಾಯಗಢ್ ಜಿಲ್ಲೆಯ ಪಶ್ಚಿಮಘಟ್ಟದಲ್ಲಿ ಅಸ್ತಿತ್ವದಲ್ಲಿರುವ ಶಿಲಾ ನಿರ್ಮಿತ ಕುತೂಹಲಕಾರಿ ಪರ್ವತಶಿಖರ.

ಸುಮಾರು 15ನೇ ಶತಮಾನದಲ್ಲಿ ಕಲಾವಂತಿನಿ ಎಂಬ ರಾಣಿಯು ಸುತ್ತಮುತ್ತಲಿನ ಪ್ರದೇಶಗಳತ್ತ ನಿಗಾವಹಿಸಲು ಸೈನ್ಯದ ತುಕಡಿಗಳನ್ನು ಇಲ್ಲಿರಿಸುತ್ತಿದ್ದರು. ಸದ್ಯ ಇದು ಮುಂಬೈಗೆ, ಸನಿಹದ ಟ್ರೆಕ್ಕಿಂಗ್ ತಾಣವೆನಿಸಿದೆ. 2250 ಅಡಿ ಎತ್ತರದ ಈ ಶಿಖರದ ಉತ್ತುಂಗ ತಲುಪಲು ಮೆಟ್ಟಿಲುಗಳನ್ನು ಕಡೆಯಲಾಗಿದೆ. ಚಾರಣಿಗರು ಪನ್ವೇಲ್ ಬಳಿಯ ಕರ್ಜತ್ ತಾಲ್ಲೂಕಿನ ಠಾಕುರ್ವಾಡಿ ಗ್ರಾಮದಿಂದ 3 ಕಿ.ಮೀ. ಪಾದಯಾತ್ರೆಯ ಮೂಲಕ ಬೆಟ್ಟದ ತಪ್ಪಲು ತಲುಪಬೇಕು. ಶಿಖರದ ತುತ್ತ ತುದಿಯನ್ನು ತಲುಪುವ ಮಾರ್ಗವು ಸರಿಸುಮಾರು 60 ಡಿಗ್ರಿ ಇಳಿಜಾರಾಗಿದೆ. ತುದಿಯಲ್ಲಿ ಬೆಟ್ಟ ಕಡಿದಾಗಿದ್ದು, ಹಗ್ಗದ ಸಹಾಯದಿಂದ ಸಾಗಬೇಕು. ಬೆಟ್ಟದ ತುದಿಯಿಂದ ಕರ್ಜತ್ ಬಳಿಯಿರುವ ಮಾಥೆರಾನ್ ಗಿರಿಧಾಮ, ಚಂದೇರಿ, ಪೆಬ್, ಎರ್ಷಲ್ ಮತ್ತು ಕರ್ನಾಲಾ ಕೋಟೆಗಳು ಮಾತ್ರವಲ್ಲದೆ ಇವುಗಳಿಗಿಂತಲೂ ದೂರದಲ್ಲಿರುವ ಮುಂಬೈ ಮಹಾನಗರದತ್ತಲೂ ನೋಟ ಹರಿಸಬಹುದು. ವರ್ಷಂಪ್ರತಿ ಹೋಳಿ ಹಬ್ಬದಂದು, ಈ ಶಿಖರದ ಮೇಲ್ಭಾಗದಲ್ಲಿ ನೃತ್ಯ ಮಾಡುವ ಪದ್ಧತಿಯನ್ನು, ಇಲ್ಲಿನ ಆದಿವಾಸಿ ಜನಾಂಗ ಅನುಸರಿಸಿಕೊಂಡು ಬಂದಿರುವುದು ಇಲ್ಲಿನ ವಿಶೇಷ. ಇದು ಅವರ ಪರಂಪರೆಯ ಭಾಗವೂ ಆಗಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ





# ಕುಮಟೆಯ 'ಮಾಣಿಭಟ್ಟ' ಮಾವು

ಗೆಳತಿ ಶಾಂತಲಾ ಉತ್ತರ ಕನ್ನಡದ ಕುಮಟಾ ವಾಸಿ. ಪ್ರತಿ ಸಾರಿಯಂತೆ ಊರಿಗೆ ಬಂದಾಗ ಕೆಲ ಪುಟ್ಟ ಮಾವಿನಹಣ್ಣು ತಂದಿದ್ದಳು. "ಇದು 'ಮಾಣಿ ಭಟ್ಟ' ತಳಿ. ಎಲ್ಲೂ ಸಿಗಲ್ಲ; ನಮ್ಮ ಕಡೆ ಮಾತ್ರ. ಹಸುರಿದ್ದರೂ ತಿಂದು ನೋಡು, ಮತ್ತೆ ಹೇಳು ರುಚಿ ಬಗ್ಗೆ" ಎಂದಿದ್ದಳು. ಆಕೆ ತಂದು ಕೊಟ್ಟ ಹಣ್ಣುಗಳನ್ನು ನಾನು, ಪತಿ ಸೇರಿ ಎಲ್ಲಾ ಒಂದೇ ಹೊತ್ತಿಗೆ ಖಾಲಿ ಮಾಡಿದೆವು. ತುಂಬಾ ರುಚಿಕರ, ಕೊಂಚ ಜೀರಿಗೆ ಘಮವುಳ್ಳ ಈ ಹಣ್ಣಿನ ಹತ್ತಾರು ತಲೆಮಾರಿನ ಕೆಲವೇ ಕೆಲವು ಮರಗಳು ಕುಮಟಾ ಆಜುಬಾಜು ಉಳಿದಿವೆಯಂತೆ. ಗೋಕರ್ಣದಲ್ಲೂ ಕೆಲ ಮರಗಳಿವೆ ಎಂಬ ಮಾಹಿತಿ ಇದೆ. ಹಣ್ಣೊಂದಕ್ಕೆ ₹10ರಿಂದ 18ರವರೆಗೆ ಗಾತ್ರದ ಮೇಲೆ ದರವಂತೆ. ಕುಮಟಾ ಮಾರುಕಟ್ಟೆಯಲ್ಲಿ ಅಪರೂಪಕ್ಕೆ ಕಾಣಸಿಗುವ ಈ ಹಣ್ಣು ಕಂಡವರು ಪೂರ್ತಿ ಖರೀದಿಸಿ ಕುಟುಂಬಸ್ಥರು, ಪರಿಚಯಸ್ಥರು, ಗೆಳೆಯರಿಗೆ ಕಳುಹಿಸುವರಂತೆ.

ಉತ್ತರಕನ್ನಡದ 'ಹವ್ಯಕ' ಸಮುದಾಯದ ಚಿಕ್ಕ ಮಕ್ಕಳಿಗೆ 'ಮಾಣಿ' ಎಂದು ಪದ ಬಳಕೆ ಮಾಡುವರು. ಈ ಹಣ್ಣಿನ ಗಾತ್ರ ನೋಡಿಯೇ 'ಮಾಣಿ ಭಟ್ಟ' ಎಂದು ಹೆಸರಿಟ್ಟಿರಬಹುದು ಅಥವಾ ಮೂಲ ಮರ ಹವ್ಯಕರ ತೋಟದಲ್ಲೋ, ಮನೆ ಆವರಣ, ಹಿತ್ತಲಲ್ಲಿ ಬೆಳೆದಿರುವ ಸಾಧ್ಯತೆ ಇರಬೇಕು ಎನ್ನುವುದು ಇಲ್ಲಿನವರ ಮಾತು.

—ಪೂರ್ಣಿಮಾ ಹೆಚ್.ಎನ್., ಹೊಸನಗರ

# ಸುಂದರ ಸೆಲ್ಫಿ ಸ್ಪಾಟ್!

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕಾಜೂರು ಬಳಿ ಇರುವ ಸೆಲ್ಫಿ ಸ್ಪಾಟ್ ಪ್ರವಾಸಿಗರ ನೆಚ್ಚಿನ ತಾಣವಾಗಿ ಗಮನಸೆಳೆಯುತ್ತಿದೆ. ಸತ್ತ ಮರಕ್ಕೆ ಬಳಿದಿರುವ ನಾನಾ ಬಣ್ಣದ ಚಿತ್ತಾರ ಈ ಪ್ರದೇಶದ ಮೂಲಕ ಹಾದು ಹೋಗುವ ಜನರನ್ನು ಸೂಜಿಗಲ್ಲಿನಂತೆ ತನ್ನ ಕಡೆಗೆ ಸೆಳೆಯುತ್ತಿದೆ. ನೇತ್ರಾವತಿ ನದಿಯ ದಡದಲ್ಲಿರುವ ಈ ಸೆಲ್ಫಿ ಸ್ಪಾಟ್‌ಗೆ ದಿಡುಪೆ, ಕುಕ್ಕಾವು ಸುತ್ತ ಇರುವ ಜಲಪಾತ, ಪಶ್ಚಿಮಘಟ್ಟಗಳ ಸೊಬಗನ್ನು ನೋಡಲು ಬರುವ ಪ್ರವಾಸಿಗರು ಭೇಟಿ ನೀಡುತ್ತಾರೆ. ಹಲವು ಬಣ್ಣ ಬಳಿದಿರುವ ಕಾರಣಕ್ಕೆ ಮರವು ಪ್ರವಾಸಿಗರಿಗೆ ಕಲಾತ್ಮಕ ಆಕೃತಿಯಾಗಿ ಕಾಣುತ್ತಿದೆ. ಸ್ಥಳೀಯರ ಸೃಜನಶೀಲತೆಯಿಂದ ಅರಳಿರುವ ಕಲಾತ್ಮಕ ಆಕೃತಿಯ ಹಿನ್ನೆಲೆಯಲ್ಲಿ ನದಿ, ಪಶ್ಚಿಮಘಟ್ಟಗಳ ಸಾಲು ಇರುವುದು ಸೊಬಗನ್ನು ತಂದಿದೆ.

—ಅರುಣ್ ಕಿಲ್ಲೂರು

